doc-195
TP-2

Regd No M 1299 34 th Year ತಾ|| 24—5—51

S A T Y A V A D I

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಪತ್ರಿಕಾ ಸ್ವಾತಂತ್ರ ರಕ್ಷಣೆಗೆ ವಿಶೇಷ ಸಭೆ

ಮುಂದಿನ ಮಾಹೆ ಕೊನೆ ವಾರದಲ್ಲಿ ಅಖಿಲ ಭಾರತ ವೃತ್ತಪತ್ರಿಕಾ ಸಂಪಾದಕರ ಸಂಘವು ಸಭೆಯನ್ನು ಕರೆಯಲಾಗಿದೆ. ಭಾರತ ಘಟನೆಯ 19 (2) ಆರ್ಟಿಕಲನ್ನು ತಿದ್ದುಪಡಿ ಮಾಡುವುದರಿಂದ ಉಂಟಾಗಿರುವ ಬೆದರಿಕೆಯಿಂದ ಪತ್ರಿಕಾ ಸ್ವಾತಂತ್ರ್ಯ ರಕ್ಷಿಸುವ ಬಗೆಗೆ ಸಭೆಯಲ್ಲಿ ಕ್ರಮಗಳನ್ನು ಪರಿಶೀಲಿಸಲಾಗುವದು.

ಭಾರತ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ 77 ಮಂದಿ ಭಾರತ ಘಟನೆಯ 19 (2) ಆರ್ಟಿಕಲ್ಲನ್ನು ತಿದ್ದುಪಡಿ ಮಾಡುವ ಒಗ್ಗೆ ಓಟು ಮಾಡಲು ಸ್ವತಂತ್ರ ಬೇಕೆಂದು ಪಂ|| ನೆಹರುವರನ್ನು ಪ್ರಾರ್ಥನೆ ಮಾಡಿರುವದಾಗಿ ದೆಹಲಿ ವಾರ್ತೆ ತಿಳಿಸುತ್ತದೆ.

ದಿವ್ಯವಾಣಿ

ಅಧಿಕಾರಿಗಳು ಜನತೆಯ ನಮ್ರ ಸೇವಕರು — ಗಾಂಧೀಜಿ

ಕಾಂಗ್ರೆಸು ಪ್ರಜಾಸತ್ತಾತ್ಮಕವಾಗಿರುವದಾವರೆಗೆ ತಾವು ಆ ಸಂಸ್ಥೆಯನ್ನು ಬಿಡುವದಿಲ್ಲವೆಂದು ದೆಹಲಿಯಲ್ಲಿ ಸಚಿವರಾಗಿರುವ ಅಹಮದ್ ಕಿದ್ವಾಯಿ ತಿಳಿಸಿದ್ದಾರೆ

ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯ ಜಂಖಾನದ ಸದಸ್ಯರು ನಿನ್ನೆ ಸಂಜೆ ಸಂವೊಸಿಯದಲ್ಲಿ ಭಾಗವಹಿಸಿದ ಸದಸ್ಯರಿಗೆ ಗೌರವಾರ್ಥ ಸತ್ಕಾರಕೂಟವನ್ನೇರ್ಪಡಿಸಿದ್ದರು.

ಮೈಸೂರು ಆಹಾರ ಸಚಿವ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಈ ಆಹಾರ ಕೈಗಾರಿಕೆ ಅಭಿವೃದ್ಧಿ ಕುರಿತು ಸಂವೋಸಿಯಂ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ನಡೆಯಿತು.

ಕಾಗೋಡಿನಲ್ಲಿ 34 ಮಂದಿ ಸತ್ಯಾಗ್ರಹಿಗಳು ಬಂಧಿತರಾಗಿದೆ.

ಕುದುರೆ ಜೂಜು ತೆರಿಗೆಯನ್ನು ಶೇ 17 ವರೆಯಿಂದ 15 ಕ್ಕೆ ಇಳಿಸಲಾಗುವ ವಾರ್ತೆ ಬೆಂಗಳೂರಿನಿಂದ ಬಂದಿದೆ.

ಮೂರು ಲಕ್ಷ ನಿಟ್ಟಿಮಾನು ಮಾತ್ರಿಗಳು ಅಮೇರಿಕದಿಂದ ಭಾರತಕ್ಕೆ ಬಂದಿರುವದಾಗಿ ದೆಹಲಿ ವಾರ್ತೆ. ಬಿಕಾನೀರಲ್ಲಿ ಅಹಕಾರಾಭಾವದಿಂದ ದೃಷ್ಟಿಹೀನ ಗತಿರವ ಮಕ್ಕಳಿಗೆ ಹಂಚಲಾಗುತ್ತದೆ

ಮಹಾ ಚುನಾವಣೆಯನ್ನು ನವೆಂಬರ್-ಡಿಸೆಂಬರಿನಿಂದ ಮುಂದುವರಿಸುವದು ಸಾಧ್ಯವಿಲ್ಲವೆಂದು ಮದ್ರಾಸು ಸರಕಾರಕ್ಕೆ ಭಾರತ ಸರ್ಕಾರ ಬರೆದಿದೆ.

ಮೈಸೂರು ಸರ್ಕಾರ ನಾಟಕ ಮತ್ತು ಸರ್ಕಸಿನ ಮೇಲೆ ಮನರಂಜನ ತೆರಿಗೆಯನ್ನು ವಜಾ ಮಾಡಿದೆ

ಇದೇ ಜೂಕ್ ತಿಂಗಳ ಕೊನೆಯೊಳಗಾಗಿ ಸರ್ದಾರ ವಲ್ಲಭಭಾಯಿ ಪಟೇಲರ ಸ್ಮಾರಕ ನಿಧಿಗಾಗಿ ಭಾರತದ ಉದ್ದಿಮೆದಾರರಿಂದ ಕೂಡಿಸುವ 1 ಕೋಟಿ ರೂ. ಗಳಲ್ಲಿ 26 ಲಕ್ಷ ರೂ. ಗಳನ್ನು ಭಾರತದ ಬನಿಕ ಉದ್ದಿಮೆದಾರರು ಕೊಡುವರೆಂದು ಕಲ್ಕತ್ತಾ ವಾರ್ತೆ.

ಬಾರಿಸಾಲಾದ ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶರಾದ ಎಂ. ಅಹಮದುಲ್ಲಾ ಉಮಡ್ಡಿ ಠಾಣೆಯ 7 ಮಂದಿ ಮುಹಮದೀಯರಿಗೆ 50 ರ ಗಲಭೆಯಲ್ಲಿ ದರೋಡೆ ಮತ್ತು ಕೊಲೆ ಮಾಡಿದ ಬಗ್ಗೆ ಅಜನ್ಮ ಬಂದೀವಾಸ ಶಿಕ್ಷೆ ವಿಧಿಸಿದರು.

ಡಾಕಾದಲ್ಲಿ ಜಾತಿ ದ್ವೇಷವೇನೂ ಇಲ್ಲವೆಂದು ಪೂರ್ವ ಬಂಗಾಳ ಸರ್ಕಾರ ಪ್ರಕಟಿಸಿದೆ

ಷಹರಾನಪುರ ನಗರ ಸಮಾಜವಾದಿ ಪಕ್ಷ, ಶ್ರೀ ಜಯಪ್ರಕಾಶನಾರಾಯಣರಿಗೆ ರೂ. 1001 ನಿಧಿ ಅರ್ಪಿಸಿತು.

ವಾರ್ತೆಗಳು

ಜಾತಿ ಗಲಭೆ ಮೊನ್ನೆ ಅಲಹಾಬಾದಿನ ಉದನಗರವಾದ ಮಾಳಿಯನಗರದಲ್ಲಿ ಸಂಭವಿಸಿ ಆರುಮಂದಿ ಗಾಯ ಪಡೆದರು

2600 ಮಂದಿ ಬಂದಿಗಳನ್ನು ಖುಲಾಸೆ ಮಾಡಲಾಗಿರುವ ವಾರ್ತೆ ನೇಪಾಳದ ಖಟ್ಮಂಡುವಿನಿಂದ ಬಂದಿದೆ.

ನ್ಯೂ ಚೈನ ನ್ಯೂಸ್ ಏಜೆನ್ಸಿ ವರದಿಯಂತೆ ಭಾರತಕ್ಕೆ ಮತ್ತೆ ನಾಲ್ಕು ಲಕ್ಷ ಟನ್ ಅಕ್ಕಿ ಬರಲಿದೆ — ಹೀಗೆಂದು ಲಂಡನ್ ವಾರ್ತೆ.

ವಿವಾಹಮಹೋತ್ಸವ

ಮೈಸೂರು ಪೌರಸಭೆ ಸದಸ್ಯರಾದ ಶ್ರೀ ಎಸ್. ಲಿಂಗಣ್ಣನವರ ಸೋದರ ಸೊಸೆ ಚಿ|| ಸೌ|| ನಂಜಮ್ಮ ಮತ್ತು ಮಂಡ್ಯ ಜಿಲ್ಲೆಯ ಎಲಿಯೂರಿನಲ್ಲಿರುವ ಶ್ರೀ ಮಾಗಡಿ ಕಾಳೇಗೌಡರ ಪುತ್ರ ಚಿ|| ರಾ|| ಎಕ್. ಕೆಂಪಯ್ಯ, ಬಿ. ಇ. ಇವರ ವಿವಾಹಮಹೋತ್ಸವ ನಜರಬಾದಿನಲ್ಲಿರುವ ಸಾಹುಕಾರ್ ಎಸ್. ಚನ್ನಯ್ಯನವರ ವಿದ್ಯಾರ್ಥಿನಿಲಯದಲ್ಲಿ ನಿನ್ನೆ ಬೆಳಿಗ್ಗೆ ವೈಭವದಿಂದ ನೆರವೇರಿತು. ಸಂಜೆ ಸ್ವಾಗತಕ್ಕೆ ಅಧಿಕಾರಿಗಳು ಗಣ್ಯರು ಆಗಮಿಸಿದ್ದರು

ಮೈಸೂರು ಸರ್ಕಾರದ ರೆವಿನ್ಯೂ ಸಚಿವರಾದ ಶ್ರೀ ಹೆಚ್. ಸಿದ್ದಯ್ಯನವರ ದ್ವಿತೀಯ ಪುತ್ರಿ ಚಿ|| ಸೌ|| ಗಿರಿಜಮ್ಮ ಮತ್ತು ಧೂಳೀಹೊಳೆ ಮಠದ ಶ್ರೀ|| ಬಸವಯ್ಯನವರ ಪುತ್ರ ಚಿ|| ಡಾ|| ರುದ್ರಪ್ಪ ಇವರ ವಿವಾಹಮಹೋತ್ಸವ ಬೆಂಗಳೂರು ರೆಸಿಡೆನ್ಸಿ ಪಾರ್ಕ್ ರೋಡಿನಲ್ಲಿರುವ 4/137 ನೇ ನಂಬರು ಗೃಹದಲ್ಲಿ ನಿನ್ನೆ ಬೆಳಿಗ್ಗೆ ವೈಭವದಿಂದ ನೆರವೇರಿತು.

ಮಂತ್ರಿಗಳು, ಅಧಿಕಾರಿಗಳು ಮುಂತಾದವರು ಆಗಮಿಸಿದ್ದರು.

ಮಹಾ ಚುನಾವಣೆ ಜರುಗಲಾರದು!

ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶನಾರಾಯಣರು ಬರ್ಮೆಲಿಯಲ್ಲಿ ಇಕ್ಕ ಹೇಳಿಕೆಯಲ್ಲಿ ಈ ವರ್ಷ ಮಹಾ ಚುನಾವಣೆ ಜರುಗುವದಂಲ್ಲಿ ನನಗೇನೋ ಸಂದೇಹವೆಂದಿರುವರು.

× ಭಾರತ ಸರ್ಕಾರ್ ಅಂಚೆ ಮೂಲಕ ಬಟ್ಟೆ, ನೂಲು ಮತ್ತು ತಯಾರಿಸಿದ ಉಡುಪುಗಳನ್ನು ಕಳಿಸುವದನ್ನು ನಿಶೇಧಿಸಿರುವದಾಗಿ ಬೊಂಬಾಯಿ ವಾರ್ತೆ.

ಗೆಂಡನೊಹನೆ ವಾಸಿಸಲು ಓರ್ವ ಮಹಿಳೆ (ಅಮೇರಿಕ) ಅವನೊಡನೆ ವಿವಾಹವಿಚ್ಛೇದನ ಬಯಸಿರುವ ವಾರ್ತೆ ಜಪಾನಿಯೋದಿಂದ ಬಂದಿದೆ.

ದೇವದಾಸಿ ಪದ್ಧತಿ ನಿರ್ಮೂಲನ

ಹುಬ್ಬಳ್ಳಿಯಿಂದ ಬಂದಿರುವ ವರದಿ ಈ ರೀತಿ ತಿಳಿಸುತ್ತದೆ —

ಸಣಕೇರಿ ಹರಿಜನ ವಾಸಸ್ಥಳದಲ್ಲಿರುವ ದುರ್ಗಾ ದೇವಾಲಯದಲ್ಲಿ ತಾ|| 19 ರ ಸಂಜೆ ಹರಿಜನ ಸಮಾಜದವರು ಮತ್ತು ರಾಷ್ಟ್ರೀಯ ಮುನಿಸಿಪಲ್ ಕಾರ್ಮಿಕ ಸಂಘದವರೂ ಸೇರಿ ವಿವಾಹಮಹೋತ್ಸವವೊಂದನ್ನು ನೆರವೇರಿಸಿದರು. ಕನ್ಯೆಯನ್ನು ದೇವದಾಸಿ ಆಗಲು ಬಿಡುವದರಿಂದ ಉಂಟಾಗುವ ಕೆಡುಕನ್ನು ಅವರ ಮನೆಯವರಿಗೆ ತಿಳಿಸಿ ವಿವಾಹ ಮಾಡಲು ಒಡಂಬಡಿಸಿದರು. ಶಿರಗುಪ್ಪಿಯ ಯುವಕನೋರ್ವ ವಿವಾಹವಾಗಲು ಸಿದ್ಧವಾಗಿ ಬಂದನು. ಕಾಂಗ್ರೆಸಿನ ಶ್ರೀ ಕಬ್ಬಾಡಿಯವರು ಪೌರೋಹಿತ್ಯ ನಡೆಸಿದರು. ಗಂಡಿನ ಹೆಸರು ಯೆಲ್ಲಪ್ಪ ಮತ್ತು ಹೆಣ್ಣಿನ ಹೆಸರು ಸಣ್ಣಯೆಲ್ಲವ್ವ ದೊಡ್ಡಮನಿ.

ಮಹಾ ಚುನಾವಣೆ ಮುಗಿಯುವವರಿಗೆ ಮದ್ರಾಸು ಪ್ರಾಂತ್ಯದಲ್ಲಿರುವ ಸರ್ವ ಸ್ಥಳೀಯ ಸಂಸ್ಥೆಗಳ ಆಯ್ಕೆಯನ್ನು ಮುಂದುವರಿಸಲು ಸರ್ಕಾರ ನಿರ್ಧರಿಸಿದೆ.

ಕಮ್ಯುನಿಸ್ಟ್ ಚೀನದ ಪ್ರಮುಖ ರೋರ್ವರು ಹೇಳಿಕೆ ಇತ್ತು ಸೆನುರ ಉಪಯೋಗ ವಸ್ತುಗಳನ್ನು ಚೀನ ಮತ್ತು ಉತ್ತರ ಕೊರಿಯಗಳಿಗೆ ಸಾಗಾಟ ಮಾಡಕೂಡದೆಂಬ ನಿರ್ಣಯನ್ನು ಕ್ರಮ ಬದ್ಧವಲ್ಲವೆಂದು ತಿಳಿಸಿ ಅದನ್ನೆದುರಿಸಲು ಚೀನ ತಯಾರಿರುವದೆಂದು ತಿಳಿಸಿರುವನು

ಅಮೇರಿಕದ ಜಾಯಿಂಟ್ ಚೀಫ್ ಆಫ್ ಸ್ಟಾಫ್ ಅಧ್ಯಕ್ಷ ಜ|| ಓಮಾರ್ ಬಾಡ್ಲಿ ಹೇಳಿಕೆಯಿತ್ತು ಕೊರಿಯ ಕಾಳಗ ಸ್ವಯಂ ನಿಲ್ಲುವದೆಂದು ತಿಳಿಸಿರುವದಾಗಿ ವಾಷಿಂಗ್ಟನ್ ವಾರ್ತೆ.

ಫಸಲುಗಳನ್ನು ನಾಶಗೊಳಿಸುವ ಮಿಡತೆಗಳನ್ನು ಕೊಲ್ಲುವ ರೋಪಿ ಪೆಸ್ಟಾಸ್ಟ್ ಎಂಬ ಹಕ್ಕಿಯನ್ನು ಪಂಜಾಬಿನಲ್ಲೆಲ್ಲೂ ಕೊಲ್ಲಲಾಗದೆಂದು ಸರ್ಕಾರಿ ಆಜ್ಞೆಯಾಗಿದೆ.

ಮೈಸೂರು ಸಂಸ್ಥಾನದ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್. ಚನ್ನಿಗರಾಮಯ್ಯನವರು ತಾ|| 20 ಸಾಗರ ಮುನಿಸಿಪಲ್ ಜ್ಯೂನಿಯರ್ ಕಟ್ಟಡವನ್ನು ಉದ್ಘಾಟಿಸಿದರೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ

ಆಹಾರ ಸಂಶೋಧನಾಲಯದಲ್ಲಿ ಕಾರ್ಯಕಲಾಪ

ಮೈಸೂರು— ಆಹಾರ ಸಂಶೋಧನಾ ಕೇಂದ್ರ ಸಂಸ್ಥೆಯವರು ಏರ್ಪಡಿ ಸಿದ್ದ ' ಆಹಾರ ಮತ್ತು ಜನಸಂಖ್ಯೆ ' ಮೇಲಿನ ಎರಡು ದಿನಗಳ ಭಾಷಣ ಮಾಲೆಯ ಮುದಂತಾನೆ ಸರ್ಕಾರದ ಆಹಾರ ಮಂತ್ರಿ ಶ್ರೀ ರೋಜೆ ವಿಕ್ಟೋರಿ ಮೂರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಸಂಶೋಧನಾಲಯದ ಡೈರೆಕ್ಟರು ಶ್ರೀ ವಿ. ಸುಬ್ರಹ್ಮಣ್ಯಂ ಎಲ್ಲರಿಗೂ ಸು ಸ್ವಾಗತ ಕೋರಿ ಭಾಷಣಮಾಡಿದರು. ಅಧ್ಯಕ್ಷರು ವಿಷಯದಲ್ಲಿ ಪ್ರಶಂಸನೀಯ ರಾಗಿ ನಾಲ್ಕು ಮಾತನಾಡಿದರು; ಆಹಾರ ಮತ್ತು ಜನಸಂಖ್ಯೆ ವಿಚಾರವು ಅತ್ಯಂತ ಮಹತ್ವದ್ದೆಂದೂ, ಆ ಒಗ್ಗೆ ಅಮೂಲಾಗ್ರವಾಗಿ ಚರ್ಚಿಸಿ ಹಿಂದು ತೀರ್ಮಾನಕ್ಕೆ ಬರಬೇಕೆಂದು, ಇದನ್ನು ಸಂಸ್ಥೆಯವು ಪರಿಶೀಲಿಸಿ ಕೇಂದ್ರ ಸರಕಾರದ ಪರ್ಯಾಲೋಚನೆಗೆ ಶಿಫಾರಸಾಗಿ ಬರುವುದೆಂದೂ ತಿಳಿಸಿದರು. ಮತ್ತು ಕೇಂದ್ರ ಸರಕಾರದ ವಿಜ್ಞಾನ ಸಂಶೋಧನಾ ಶಾಖೆಯ ಸಚಿವ ಶ್ರೀ ಪ್ರಕಾಶರು ಕಳುಹಿಸಿದ್ದ ಸಂದೇಶವನ್ನು ತಿಳಿಸಿದರು.

ಇದರಲ್ಲಿ ಭಾಗವಹಿಸಲು ಭಾರತದ ನಾನಾ ಕಡೆಯಿಂದ ನಿಪುಣರು ಬಂದಿದ್ದರು.

ಶಕ್ತಿಸುಧಾ For Quality Printing
L. N. Press
Siwarampet, Mysore
— ಉತ್ತಮವಾದ ಟಾನಿಕ್ —

ರಣಜಿತ್ ಆಕರ್ಷಣೀಯ 3 ನೇ ವಾರ

SAGAI ಸಗಾಯಿ
ರೆಹನಾ, ಯಾಕೂಬ್, ಪ್ರೇಮ್‌ನಾಥ್, ಗೋಪ್ ನಾಟ್ಯವಹಿಸಿರುವ
ಸಂಗೀತ, ನೃತ್ಯ, ಹಾಸ್ಯಲಹರಿಯಿಂದ ಕೂಡಿದ ಅಪೂರ್ವ ಹಿಂದೀ ವಾಕ್ಚಿತ್ರ
ಪ್ರತಿದಿನ 3 ಪ್ರದರ್ಶನಗಳು

ಉಡ್‌ಲ್ಯಾಂಡ್ಸ್ 18-5-51 ರಿಂದ
ಶಿಸು
ನಿರೂಪರಾಯ್, ತ್ರಿಲೋಕಕಪೂರ್
ರಾಂಪಿಂಗ್, ದುರ್ಗಾಖೋಟೆ
ಪಾತ್ರವಹಿಸಿರುವ ಅತ್ಯದ್ಭುತ, ಆಕರ್ಷಣೀಯ, ವನಮೋಹನ
ಚಿತ್ರರತ್ನ (ಹಿಂದಿ)
ಬೀಮಸೇನ್
BHIMSEN
ಪ್ರತಿ ದಿನ 3 ಪ್ರದರ್ಶನಗಳು

"ಗೋರಕ್ಷಣ"
ಕಾರ್ಯ ಎಲ್ಲೆಲ್ಲೂ ನಡೆಯಲಿ

Announcement
Theatre building old materials and furniture are being sold very cheap.
Apply to—
NEW OPERA TALKIES
MYSORE
ಏನೆಲ್ಲಾ ಕಟ್ಟಿಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸಲಭ ಬೆಲೆಗೆ ಮಾರಾಟಕ್ಕಿವೆ.
ವಿವರಗಳಿಗೆ—
ನ್ಯೂ ಆಪೇರಾ ಟಾಕೀಸ್
ಮೈಸೂರು

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಪಂಪ್ಲಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ
ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
— ಪ್ರಬೋಧ —
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

diter, Printed and Published by M. S. Krishna Rao, at the Sharada Press Chamarajapuram Mysore